07-09-2022
Vijaya Karnataka p.09

ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಇಲ್ಲ

ಬೆಂಗಳೂರು: ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಪ್ರಶ್ನೆಯೇ ಇಲ್ಲ. ಇಂಧನ ಇಲಾಖೆ ರೈತ ಸ್ನೇಹಿಯಾಗಿದ್ದು, ರೈತರಿಗೆ ತೊಂದರೆಯಾಗುವಂತಹ ಯಾವ ಕೆಲಸಕ್ಕೂ ಬಿಜೆಪಿ ಸರಕಾರ ಕೈಹಾಕುವುದಿಲ್ಲ ಎಂದು ಇಂಧನ ಸಚಿವ ಎಂದು ವಿ.ಸುನೀಲ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ''ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರ ದಲ್ಲಿದ್ದ ಅವಧಿಯಲ್ಲಿ ಎಸ್ಕಾಂಗಳಿಗೆ 8,841 ಕೋಟಿ ರೂ.ಸಬ್ಸಿಡಿ ಬಾಕಿ ಉಳಿಸಿದ್ದರು. ಈ ಮೂಲಕ ಎಸ್ಕಾಂಗಳನ್ನು ದುರ್ಬಲ ಗೊಳಿಸಿ ಖಾಸಗೀಕರಣ ಮಾಡುವ ಹುನ್ನಾರವನ್ನು ಸಿದ್ದರಾಮಯ್ಯ ನಡೆಸಿದ್ದರು. ಈಗಲೂ ಕೃಷಿ ಪಂಪ್‌ಸೆಟ್ ಗಳಿಗೆ ಮೀಟರ್ ಅಳವಡಿಸಲು ಭೂಮಿಕೆ ಸಿದ್ಧವಾಗುವುದನ್ನು ಕಾಂಗ್ರೆಸ್ ಬಯಸಿದೆ. ಸಿದ್ದರಾಮಯ್ಯ ಅವರು ಬಾಕಿ ಉಳಿಸಿದ್ದ ಸಬ್ಸಿಡಿಯನ್ನು ಈಗ ಭರಿಸುವ ವ್ಯವಸ್ಥೆ ಮಾಡಲಾಗಿದೆ.'' ಎಂದು ತಿಳಿಸಿದರು.

''ಪ್ರತಿವರ್ಷ 2.5 ಲಕ್ಷ ಕೃಷಿ ಪಂಪ್‌ಸೆಟ್ ಗಳು ಸೇರ್ಪಡೆಯಾಗುತ್ತಿವೆ. ಹೀಗಾಗಿ ಕೆಇಆರ್‌ಸಿ ನಿಗದಿಪಡಿಸಿದ್ದಕ್ಕಿಂತ ಸಬ್ಸಿಡಿ ಹೆಚ್ಚಳವಾದ ಹಿನ್ನೆಲೆಯಲ್ಲಿ ಹೆಚ್ಚುವರಿ ಅನುದಾನಕ್ಕಾಗಿ ಇಲಾಖೆ ಸರಕಾರವನ್ನು ಕೇಳಿತ್ತು. ಹೆಚ್ಚುವರಿಯಾಗಿ 1200 ಕೋಟಿ ರೂ. ಬಿಡುಗಡೆ ಮಾಡಲು ಸಿಎಂ ಬೊಮ್ಮಾಯಿ ಸಮ್ಮತಿಸಿದ್ದಾರೆ,'' ಎಂದರು.

07-09-2022
Prajavani p.03

ಲಾಲ್‌ಬಾಗ್: ಪ್ರತಿ ಇಂಗುಗುಂಡಿಯಿಂದ 1.28 ಲಕ್ಷ ಲೀಟರ್ ಮಳೆ ನೀರು ಸಂಗ್ರಹದ ಗುರಿ

'ಒನ್ ಬಿಲಿಯನ್ ಡ್ರಾಪ್ಸ್' ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಗು ಗುಂಡಿಗಳ (ಪರ್ಕೊಲೇಷನ್ ವೆಲ್) ಮೂಲಕ ಮಳೆ ನೀರು ಸಂಗ್ರಹಿಸುವ 'ಒನ್ ಬಿಲಿಯನ್ ಡ್ರಾಪ್ಸ್ ಅಭಿಯಾನ'ಕ್ಕೆ ಮಂಗಳವಾರ ಲಾಲ್‌ಬಾಗ್‌ನಲ್ಲಿ ಚಾಲನೆ ನೀಡಲಾಯಿತು.

ತೋಟಗಾರಿಕೆ ಇಲಾಖೆ, ಯುನೈಟೆಡ್ ವೇ ಆಫ್ ಬೆಂಗಳೂರು ಮತ್ತು ಎಂಫಸಿಸ್ ಕಂಪನಿಯು ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಸಹಭಾಗಿತ್ವದಲ್ಲಿ ಪರಿಸರ ಅರಣ್ಯೀಕರಣ ಮತ್ತು ಸಮಗ್ರ ಜಲಾನಯನ ಅಭಿವೃದ್ಧಿಯ ಮೂರು ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಯುನೈಟೆಡ್ ವೇ ಬೆಂಗಳೂರಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಕೃಷ್ಣನ್ ಮಾತನಾಡಿ, 'ಎಂಫಸಿಸ್ ಬೆಂಬಲದೊಂದಿಗೆ ಲಾಲ್‌ಬಾಗ್ ಆವರಣದಲ್ಲಿ 220 ಇಂಗುಗುಂಡಿಗಳನ್ನು ನಿರ್ಮಿಸಲಾಗುವುದು. ಇವುಗಳಿಂದ ನೀರಿನ ಹರಿವು, ಪ್ರವಾಹ, ಮತ್ತು ಅಂತರ್ಜಲದಂತಹ ಸಮಸ್ಯೆಗಳಿಗೆ ಪರಿಹಾರ ಸಾಧ್ಯ. ಜೊತೆಗೆ ಅಂತರ್ಜಲ ಮಟ್ಟವು ಗಣನೀಯವಾಗಿ ಏರಿಕೆಯಾಗುತ್ತದೆ' ಎಂದರು.



ಲಾಲ್‌ಬಾಗ್‌ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಇಂಗು ಗುಂಡಿಯ (ಪರ್ಕೊಲೇಷನ್ ವೆಲ್) ಮಾದರಿಯನ್ನು ಅನಾವರಣಗೊಳಿಸಲಾಯಿತು –ಪ್ರಜಾವಾಣಿ ಚಿತ್ರ

ಲಾಲ್‌ಬಾಗ್: ಇಂಗುಗುಂಡಿಗಳು ಸಹಕಾರಿ

ಲಾಲ್‌ಬಾಗ್‌ನಲ್ಲಿ ಈಗಾಗಲೇ 280 ಇಂಗು ಗುಂಡಿಗಳಿದ್ದು, ಭೌಗೋಳಿಕವಾಗಿ ದಕ್ಷಿಣ ಪ್ರದೇಶವು ಎತ್ತರದಿಂದ ಹಾಗೂ ಉತ್ತರ ಪ್ರದೇಶವು ಇಳಿಜಾರು ಪ್ರದೇಶದಿಂದ ಕೂಡಿದೆ. ಮಳೆ ಬಂದ ಸಂದರ್ಭದಲ್ಲಿ ನೀರು ಕಾಲುವೆಗಳ ಮೂಲಕ ಹಾದುಹೋಗಿ, ಪೋಲಾಗುತ್ತಿತ್ತು. ಇದನ್ನು ತಡೆಯಲು ಇಂಗುಗುಂಡಿಗಳು ಸಹಕಾರಿಯಾಗಿವೆ. ಉದ್ಯಾನದಲ್ಲಿ 1,850 ವಿವಿಧ ಜಾತಿಯ ಮರಗಳಿಗೆ ಸಂಗ್ರಹ ಮಾಡಿದ ನೀರನ್ನು ಬಳಸಲಾಗುತ್ತದೆ' ಎಂದು ಲಾಲ್‌ಬಾಗ್ ಉಪನಿರ್ದೇಶಕಿ ಕುಸುಮಾ ಮಾಹಿತಿ ನೀಡಿದರು.

'ಮುಂದಿನ ಮೂರು ವರ್ಷಗಳಲ್ಲಿ ಬೆಂಗಳೂರಿನ ವಿವಿಧ ಭಾಗಗಳಲ್ಲಿ 1,100 ಇಂಗುಗುಂಡಿಗಳನ್ನು ನಿರ್ಮಿಸುವ ಗುರಿ ಇದೆ. ತುಮಕೂರು ಜಿಲ್ಲೆಯ ಕೊರಟಗೆರೆಯ ದೊಡ್ಡಸಾಗ್ಗೆರೆಯಲ್ಲಿ 228 ಎಕರೆ ಸಸ್ಯೋದ್ಯಾನದ 11 ಎಕರೆ ಪ್ರದೇಶದಲ್ಲಿ 1 ಲಕ್ಷ ಒಣ ಎಲೆ ಉದುರುವ ಮರದ ಸಸಿಗಳನ್ನು ನೆಡಲಾಗುತ್ತದೆ. ಮೂರು ವರ್ಷಗಳವರೆಗೂ ಎಂಫಸಿಸ್ ಬೆಂಬಲದೊಂದಿಗೆ ಪೋಷಣೆ ಮಾಡಲಾಗುವುದು' ಎಂದು ಮಾಹಿತಿ ನೀಡಿದರು.

ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ತೋಟಗಾರಿಕೆ ಇಲಾಖೆ ನಿರ್ದೇಶಕ ಕೆ. ನಾಗೇಂದ್ರ ಪ್ರಸಾದ್, ಎಂಫಸಿಸ್‌ನ ಸಿಎಚ್‌ಆರ್‌ಒ ಶ್ರೀಕಾಂತ್ ಕರ್ಣಾ ಇದ್ದರು.

For updates subscribe YouTube and Facebook page

YouTube

facebook

Library Facebook page

Library YouTube page